ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ.

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು - 1**

ಸಂಖ್ಯೆ: ಸಿ೮(3) ಟಿಎಪಿ 3/2008-09 ದಿನಾಂಕ : 03-03-2009

2008-09ನೇ ಸಾಲಿನಲ್ಲಿ ಮುಂದುವರೆದ ಯೋಜನಾ ಕಾರ್ಯಕ್ರಮದಡಿ ರಾಜ್ಯದ 8 ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ಇ-ವಾಹಿನಿ ಅಳವಡಿಕೆಗೆ ಕಂಪ್ಯೂಟರ್ , ಲ್ಯಾಪ್‌ಟ್ಯಾಪ್ ಖರೀದಿ ಟೆಂಡರ್ ದಿನಾಂಕ: 03-03-2009ರ ಪೂರ್ವಾಹ್ನ 11-30ಕ್ಕೆ ನಡೆದ ಪ್ರೀ-ಬಿಡ್ ಸಭೆಯ ನಡಾವಳಿಗಳು

<u>ಹಾಜರಿದ್ದ ಇಲಾಖಾ ಅಧಿಕಾರಿಗಳು</u>

1. ಶ್ರೀ ಮೀರ್ ಉಬೇದುಲ್ಲಾ, ನಿರ್ದೇಶಕರು [ಪ್ರಾ.ಶಿ]
2. ಶ್ರೀ ಎನ್.ಬಿ.ಪಾಟೀಲ್, ಜಂಟಿ ನಿರ್ದೇಶಕರು[ಆಡಳಿತ]
3. ಶ್ರೀ ಎಂ.ಚಂದ್ರಯ್ಯ, ಸಹಾಯಕ ನಿರ್ದೇಶಕರು [ಆಡಳಿತ]
4. ಶ್ರೀ ಮಿರ್ಜಾ ಕಲೀಮುಲ್ಲ, ಅಧೀಕ್ಷಕರು, ಕಛೇರಿ ಸಿಬ್ಬಂದಿ ಶಾಖೆ

<u>ಹಾಜರಿದ್ದ ಟೆಂಡರ್‌ದಾರರ ಪ್ರತಿನಿಧಿಗಳು</u>

1. ಶ್ರೀ ಜಾಕೀರ್ ಹುಸೇನ್, ವಿಪ್ರೋ ಇನ್ಫೋಟೆಕ್
2. ಶ್ರೀ ಸೈಯದ್ ಮುಷ್ತಾಕ್, ಹೆಚ್.ಸಿ.ಎಲ್ ಇನ್ಫೋಸಿಸ್ಟಂಸ್ ಲಿಮಿಟೆಡ್

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ನಿರ್ದೇಶಕರು [ಪ್ರಾ.ಶಿ] ರವರು ಟೆಂಡರ್‌ದಾರರನ್ನು /ಸಂಸ್ಥೆಯ ಪ್ರತಿನಿಧಿಗಳಿಗೆ ಸ್ವಾಗತ ಕೋರಿ ಅವರನ್ನು ಉದ್ದೇಶಿಸಿ ಮಾತನಾಡುತ್ತಾ, ಸರ್ಕಾರದ ಧ್ಯೇಯೋದ್ದೇಶಗಳನ್ನು ಸ್ಪಷ್ಟಪಡಿಸಿ ಪ್ರಸಕ್ತ ಸಾಲಿನಲ್ಲಿ ಸುಮಾರು 120 ಕಂಪ್ಯೂಟರ್ ಮತ್ತು 38 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸರ್ಕಾರದ ಇ-ಆಡಳಿತ ಶಾಖೆಯಿಂದ ಗುರುತಿಸಿರುವ Empanelled Vendors ಇವರು ಮಾತ್ರ ಭಾಗವಹಿಸುವಂತೆ ಅಲ್ಪಾವಧಿ ಟೆಂಡರನ್ನು ಕರೆಯಲಾಗಿದೆ. ಆದ ಕಾರಣ ಈ ಬಗ್ಗೆ ಪುಟ ಸಂಖ್ಯೆ: 36ರ ಕಂಡಿಕೆ (b) (i) (ii) (iii) Bids of quoting as authorized representative of a computer manufacturer …….. ಎಂದಿರುವುದು ಎಲ್ಲರಿಗೂ ಭಾಗವಹಿಸಲು ಅವಕಾಶವಿರುವ ಟೆಂಡರ್‌ಗಳಿಗೆ ಮಾತ್ರ ಅನ್ವಯಿಸುತ್ತದೆ. ಈಗ ನಾವು ಇ-ಆಡಳಿತ ಶಾಖೆಯಿಂದ ಗುರುತಿಸಿರುವ Empanelled Vendors ಮಾತ್ರ ಭಾಗವಹಿಸುವಂತೆ ಅಲ್ಪಾವಧಿ ಟೆಂಡರನ್ನು ಕರೆದಿರುವುದರಿಂದ ಸದರಿ ಕಂಡಿಕೆಯನ್ನು ಕೈಬಿಡಲಾಗಿದೆ. ಈ ಅಂಶವನ್ನು ಸಭೆಯಲ್ಲಿ ತಿಳಿಸುತ್ತಾ ಬಿಡ್ ದಸ್ತಾವೇಜಿನಲ್ಲಿ ಏನಾದರೂ ಸ್ಪಷ್ಟೀಕರಣ ಬೇಕಿದ್ದಲ್ಲಿ ತಿಳಿಸಲು ಬಿಡ್‌ದಾರರು/ಪ್ರತಿನಿಧಿಯವರಿಗೆ ಸೂಚಿಸಿದರು.

- ಬಿಡ್‌ದಾರರು ದಸ್ತಾವೇಜಿನ ಪುಟ ಸಂಖ್ಯೆ: 02 ರಲ್ಲಿನ ಆದೇಶ ಸ್ವೀಕರಿಸಿದ 15 ದಿನಗಳೊಳಗೆ ಸರಬರಾಜು ಪ್ರಾರಂಭಿಸಿ 90 ದಿನಗಳೊಳಗೆ ಮುಕ್ತಾಯಗೊಳಿಸಬೇಕು ಎಂದು ನಮೂದಾಗಿರುತ್ತದೆ. ಹಾಗೆಯೇ ಪುಟಸಂಖ್ಯೆ 33ರಲ್ಲಿ ಆದೇಶ ಸ್ವೀಕರಿಸಿದ 07 ದಿನಗಳೊಳಗೆ ಸರಬರಾಜು ಮತ್ತು ಅಳವಡಿಕೆ ಮುಕ್ತಾಯಗೊಳಿಸಬೇಕು ಎಂದಿರುತ್ತದೆ ಇದರಲ್ಲಿ ಯಾವುದನ್ನು ನಾವು ಪರಿಗಣಿಸಬೇಕು ಎಂಬುದನ್ನು ಸ್ಪಷ್ಟೀಕರಿಸಲು ಕೋರಿದರು.

ಪುಟ ಸಂಖ್ಯೆ 02ರಲ್ಲಿ ತಪ್ಪಾಗಿ ನಮೂದಾಗಿದ್ದು ಅದನ್ನು ಸರಬರಾಜು ಆದೇಶ ಸ್ವೀಕರಿಸಿದ 07 ದಿನಗಳೊಳಗೆ ಗಣಕಯಂತ್ರಗಳನ್ನು ಮತ್ತು ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಿ ಅಳವಡಿಸಬೇಕು ಎಂದು ಓದಿಕೊಳ್ಳಲು ಸೂಚಿಸಲಾಯಿತು.

- ಪುಟ ಸಂಖ್ಯೆ: 23ರಲ್ಲಿ ವಾರಂಟಿ ಮೊತ್ತ ಟೆಂಡರ್ ಮೊತ್ತಕ್ಕೆ ವಾರ್ಷಿಕ ಶೇ 7ರಂತೆ 3 ವರ್ಷಕ್ಕೆ ಶೇ.21ರಷ್ಟು ಬ್ಯಾಂಕ್ ವಾರಂಟಿ ನೀಡಬೇಕು ಎಂದಿರುವುದರ ಬಗ್ಗೆ ಆಕ್ಷೇಪಿಸುತ್ತಾ ಬಿಡ್‌ದಾರರು ಒಂದೇ ಭಾರಿ 21% ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ನೀಡುವುದರ ಬದಲಾಗಿ ಮೊದಲ ವರ್ಷಕ್ಕೆ ಶೇ.7% ರ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿ ಸಲ್ಲಿಸುತ್ತೇವೆ ಕ್ರಮವಾಗಿ 2 ಮತ್ತು 3 ವರ್ಷಕ್ಕೆ ಅವುಗಳನ್ನು ನವೀಕರಿಸುವ ಹಾಗೆ ಅಥವಾ ಹೊಸದಾಗಿ ಬಿಡ್‌ಗಳನ್ನು ನೀಡುವ ರೀತಿ ಅವಕಾಶ ಕಲ್ಪಿಸ ಬೇಕು ಎಂದು ಕೋರಿದರು.

ಇದರ ಬಗ್ಗೆ ಸಭೆಯಲ್ಲಿ ಚರ್ಚಿಸಿದ ನಂತರ ಮಾನ್ಯ ನಿರ್ದೇಶಕರು ಮೊದಲ ವರ್ಷದಲ್ಲಿ ಶೇ.21% ರ ಮೊತ್ತಕ್ಕೆ ಮೂರು ವರ್ಷದವರೆವಿಗೆ ಮಾನ್ಯತೆಯಿರುವ ಬ್ಯಾಂಕ್ ಗ್ಯಾರಂಟಿ ನೀಡಲು ನಂತರ ಎರಡನೇ ವರ್ಷದ ಪ್ರಾರಂಭದಲ್ಲಿ ಶೇ.14% ರ ಮೊತ್ತಕ್ಕೆ ಎರಡು ವರ್ಷದವರೆವಿಗೆ ಮಾನ್ಯತೆಯಿರುವ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ಶೇ.21% ಬ್ಯಾಂಕ್ ಗ್ಯಾರಂಟಿ ಹಿಂಪಡೆಯಲು ಹಾಗೆಯೇ ಮೂರನೇ ವರ್ಷದ ಪ್ರಾರಂಭದಲ್ಲಿ ಶೇ.7% ರ ಮೊತ್ತಕ್ಕೆ ಒಂದು ವರ್ಷದವರೆವಿಗೆ ಮಾನ್ಯತೆಯಿರುವ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ಶೇ.14% ರ ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಹಿಂಪಡೆಯಲು ಸೂಚಿಸಲಾಯಿತು.

- ಪುಟ ಸಂಖ್ಯೆ: 28 ರಲ್ಲಿರುವ "The purchaser will test the equipment after completion of the installation and commissioning at the site of the installation" ಎಂದಿರುವುದರ ಬಗ್ಗೆ ಬಿಡ್‌ದಾರರು ಒಟ್ಟಾರೆ ಸಾಮಗ್ರಿಗಳನ್ನು ಪರಿಶೀಲಿಸಲಾಗುವುದೇ ಅಥವಾ ಸರಬರಾಜು ಮಾಡಿದ ಸ್ಥಳಗಳಲ್ಲಿ ಪರಿಶೀಲಿಸಲಾಗುವುದೇ ಎಂದು ಪ್ರಶ್ನಿಸಿದರು.

ಸರಬರಾಜು ಮಾಡಿದ ಸಾಮಗ್ರಿಗಳನ್ನು ಸರಬರಾಜು ಮಾಡಿ ಅಳವಡಿಸಿರುವ ಸ್ಥಳಗಳಲ್ಲಿ ಪರಿಶೀಲಿಸಲಾಗುವುದೆಂದು ಸ್ಪಷ್ಟೀಕರಣ ನೀಡಲಾಯಿತು.

- ಪುಟ ಸಂಖ್ಯೆ: 32ರಲ್ಲಿ ದಿನದ 24ಗಂಟೆ ವಾರದ 7 ದಿನಗಳೂ ನಿರ್ವಹಣೆಗೆ ಅವಶ್ಯವಿರಬೇಕೆಂದು ತಿಳಿಸಿರುವುದನ್ನು ಬಿಡ್‌ದಾರರು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ನಿರ್ದೇಶಕರು ಸರ್ಕಾರದ ಕಾರ್ಯನಿರ್ವಹಣೆ ಅವಧಿಯಲ್ಲಿ ಅತ್ಯಗತ್ಯ ಸಂದರ್ಭದಲ್ಲಿ ಈ ಕಂಡಿಕೆಯು ಅನ್ವಯವಾಗುವುದೆಂದು ತಿಳಿಸಲಾಯಿತು.

- ಪುಟ ಸಂಖ್ಯೆ: 3ರಲ್ಲಿ 7ದಿನಗಳೊಳಗೆ ಸರಬರಾಜು ಮಾಡಬೇಕೆಂಬುದನ್ನು ಬಿಡ್‌ದಾರರು ಆಕ್ಷೇಪಿಸಿದರು.

ಸಮಯಾವಾಕಾಶ ಕಡಿಮೆ ಇರುವುದರಿಂದ ಇದನ್ನು 7 ದಿನಗಳೆಂದೇ ಪರಿಗಣಿಸಲು ತಿಳಿಸಲಾಯಿತು.

[ಮೀರ್ ಉಬೇದುಲ್ಲಾ]
ನಿರ್ದೇಶಕರು[ಪ್ರಾ.ಶಿ]
4/3/2009